**ನರ್ಸ್:** ಡಾಕ್ಟ್ರೇ ದಯವಿಟ್ಟು ನೀವು ಪೇಷೆಂಟ್ ಬಾಡೀನ ಅಷ್ಟು ಡೀಪಾಗಿ ಕಟ್ ಮಾಡಬೇಡಿ.
**ಡಾಕ್ಟರ್:** ಯಾಕೆ ಸಿಸ್ಟರ್?
**ನರ್ಸ್:** ಈ ತಿಂಗಳಲ್ಲಿ ಇದು ಸೇರಿದ್ರೆ ಒಟ್ಟು ಆರು ಟೇಬಲ್ ತಂದಿರೋದು. ಅದಕ್ಕೆ!

***

**ಗುರುಗಳು:** ಅಲ್ರೋ ಗುಂಡ ಎಲ್ಲಾ ಬಿಟ್ಟು ನೀನು ಸಿಗರೇಟು ಸೇದುವುದನ್ನು ಯಾಕೆ ಶುರುಮಾಡಿದ್ದೀಯಾ?
**ಗುಂಡ:** ಗಾಂಧೀಜಿಯವರೇ ಹೇಳಿದ್ದಾರಲ್ಲ ಅದಕ್ಕೆ.
**ಗುರುಗಳು:** ಏನಂತ ಹೇಳಿದ್ದಾರೆ?
**ಗುಂಡ:** ಕೆಟ್ಟದ್ದನ್ನ ಸುಟ್ಟುಹಾಕು ಅಂತ ಅದಕ್ಕೆ.

***

**ಜ್ಯೋತಿಷಿ:** ನಿನ್ನ ದೋಷ ಪರಿಹಾರಕ್ಕೆ, ನೀನು ಒಂದು ಕೆಲಸ ಮಾಡಬೇಕಯ್ಯಾ.
**ಗುಂಡ:** ಏನು ಮಾಡಬೇಕು ಗುರುಗಳೇ.
**ಜ್ಯೋತಿಷಿ:** ನೀನು 36 ವರ್ಷ ವಯಸ್ಸಿನ ಮಹಿಳೆಯನ್ನು ಮದುವೆಯಾಗಬೇಕು.
**ಗುಂಡ:** 18 ವಯಸ್ಸಿನ ಇಬ್ಬರು ಹೆಣ್ಣುಗಳನ್ನು ಮದುವೆಯಾಗಬಹುದಾ ಜ್ಯೋತಿಷಿಗಳೇ?

***

**ರಾಯರು:** ಏನೋ ಗುಂಡ ಎಲ್ಲೋ ಹೊರಟಹಾಗಿದೆ?
**ಗುಂಡ:** ಅಡುಗೆ ಮಾಡುವುದನ್ನು ಕಲಿಯಲು ಹೋಗುತ್ತಿದ್ದೇನೆ.
**ರಾಯರು:** ಅಂದರೆ ಹೊಸದಾಗಿ ಹೋಟೆಲ್ ತೆರೆಯುತ್ತಿದ್ದೀಯಾ?
**ಗುಂಡ:** ಇಲ್ಲಾ ರಾಯರೇ! ಮದುವೆಯಾಗುತ್ತಿದ್ದೇನೆ.

***

**ಪೊಲೀಸ್:** ಮೂರು ಜನ ಬೈಕ್‌ನಲ್ಲಿ ಹೋಗಬಾರದಂತ ಗೊತ್ತಿಲ್ವಾ?
**ಗುಂಡ:** ಗೊತ್ತು ಸಾ! ಅದಕ್ಕೆ ಒಬ್ಬನನ್ನು ವಾಪಸ್ಸು ಮನೆಗೆ ಬಿಟ್ಟುಬರೋಣ ಅಂತ ಹೋಗ್ತಾ ಇದೀನಿ!

***

**ಟೀಚರ್:** ಗುಂಡ ಕೋಲಾರದಲ್ಲಿ ಚಿನ್ನದ ಗಣಿ ಇದೆ. ಹಾಗೇ ಕುದುರೆಮುಖದಲ್ಲಿ ಏನಿದೆ ಹೇಳು ನೋಡೋಣ?
**ಗುಂಡ:** ಇನ್ನೇನಿರುತ್ತೆ ಮೇಡಂ? ಅದೇ ಕಿವಿ, ಕಣ್ಣು, ಮೂಗು, ಬಾಯಿ ಇತ್ಯಾದಿ.

***

**ಗೆಳೆಯ:** ನನ್ನ ಹೆಂಡತಿ ಒಂದು ಸೀರೆ ಖರೀದಿಸುವುದಕ್ಕೆ ಹತ್ತು ಅಂಗಡಿಗೆ ಭೇಟಿ ನೀಡುತ್ತಾಳೆ.
**ಗುಂಡ:** ನಿನ್ನ ಹೆಂಡತಿ ಎಷ್ಟೋ ವಾಸಿ! ನನ್ನ ಹೆಂಡತಿ ಒಂದೇ ಅಂಗಡಿಯಲ್ಲಿ ಹತ್ತು ಸೀರೆ ಖರೀದಿಸುತ್ತಾಳೆ.

***

**ಸರ್ದಾರ್‌ಜಿ:** ಸಾರ್ ನಿಮ್ಮ ನಾಯಿ ಹುಲಿ ತರಹ ಇದೆ. ಅದಕ್ಕೆ ತಿನ್ನೋಕೆ ಏನು ಹಾಕ್ತೀರಾ?
**ಗುಂಡ:** ಸರ್ದಾರ್ಜಿ ಇದು ಹುಲೀನೆ! ಅದರ ಲವರ್ ಹಿಂದೆ ತಿರುಗಿ ತಿರುಗಿ ನಾಯಿ ತರಹ ಆಗಿಬಿಟ್ಟಿದೆ ಅಷ್ಟೆ.

***

**ಮಗಳು:** ಅಪ್ಪಾ ತೆಂಗಿನಕಾಯಿಯೊಳಗೆ ನೀರು ಹೇಗೆ ಸೇರಿಕೊಳ್ಳುತ್ತದೆ?
**ಅಪ್ಪ:** ಈ ನಿನ್ನ ಪ್ರಶ್ನೆಗೆ ಎಂತಹ ಮೂರ್ಖನಾದರೂ ಉತ್ತರಿಸುತ್ತಾನೆ.
**ಮಗಳು:** ಅರೆ ಹೌದಾ? ಅದಕ್ಕೆ ಏನೋ ಅಮ್ಮ ನಿನ್ನನ್ನು ಕೇಳು ಅಂತ ಹೇಳಿದಳು.


***

**ಟೀಚರ್:** ನಮ್ಮ ದೇಶದ ಜನರಿಗೆ ಅತ್ಯಂತ ಗೊಂದಲದ ದಿನ ಯಾವುದು?
**ಗುಂಡ:** ಫೆಬ್ರುವರಿ 14. ರಕ್ಷಾಬಂಧನದ ದಿನ ಮೇಡಂ.

***

**ಟೀಚರ್:** ನೋಡಿ ಗಂಡು ಮಕ್ಕಳೇ, ಇಲ್ಲಿರುವ ಹೆಣ್ಣುಮಕ್ಕಳನ್ನೆಲ್ಲ ನಿಮ್ಮ ಸಿಸ್ಟರ್ ಅಂತ ತಿಳೀಬೇಕು. ಗೊತ್ತಾಯ್ತಾ?
**ಗುಂಡ:** ಅಬ್ಬಾ ನನಗೆ ಈಗ ಸಮಾಧಾನವಾಯಿತು ಮೇಡಂ.
**ಟೀಚರ್:** ಯಾಕೋ ಹಾಗೆ ಹೇಳ್ತಾ ಇದೀಯಾ?
**ಗುಂಡ:** ಯಾಕಂದ್ರೆ ನನ್ನ ಲವರ್ ಪಕ್ಕದ ಕ್ಲಾಸಿನಲ್ಲಿದ್ದಾಳೆ ಅದಕ್ಕೆ ಮೇಡಮ್.

***



ಸದ್ಯಕ್ಕೆ ಹಳೆ ಕುಕ್ಕರ್‌ನಲ್ಲಿ ಮ್ಯಾನೇಜ್ ಮಾಡು. ಹೊಸದು ಕೊಂಡುಕೊಳ್ಳುವುದು ಬೇಡ. ಹೇಗಿದ್ರೂ ಚುನಾವಣೆ ಹತ್ತಿರ ಬರ್ತಿದೆಯಲ್ಲ...!

**ಸೈನಿಕ (ಮೇಲಧಿಕಾರಿಗೆ):** ಸಾರ್ ಮದ್ದುಗುಂಡುಗಳೆಲ್ಲ ಖಾಲಿಯಾಗಿವೆ.
**ಮೇಲಧಿಕಾರಿ:** ಅರೆ ಹೌದಾ? ಹಾಗಾದರೆ ಯಾರಿಗೂ ಹೇಳಬೇಡ! ಶತ್ರುಗಳಿಗೆ ಗೊತ್ತಾದರೆ ನಮ್ಮನ್ನು ಮುಗಿಸಿಬಿಡುತ್ತಾರೆ. ಗುಂಡುಗಳನ್ನು ಹಾರಿಸುತ್ತಲೇ ಇರಿ. ನಿಲ್ಲಿಸಬೇಡಿ!

***

**ವ್ಯಾಪಾರಿ ಹೆಂಡತಿ:** ರೀ ಇವತ್ತು ಪಕ್ಕದ ಅಂಗಡಿಯಿಂದ ಯಾವ ಸಾಮಾನನ್ನೂ ಕೊಂಡುಕೊಂಡು ಬರಬೇಡಿ.
**ವ್ಯಾಪಾರಿ:** ಅಯ್ಯೋ ಯಾಕೆ?
**ವ್ಯಾಪಾರಿ ಹೆಂಡತಿ:** ಅವರು ನಮ್ಮ ಅಂಗಡಿಯ ತಕ್ಕಡಿ ತೆಗೆದುಕೊಂಡು ಹೋಗಿದ್ದಾರೆ.

***

**ಗೆಳೆಯ:** ಲೋ ಗುಂಡ ಪ್ರೇಮ ವಿವಾಹಕ್ಕೂ ಸಾಂಪ್ರದಾಯಿಕ ವಿವಾಹಕ್ಕೂ ಇರುವ ವ್ಯತ್ಯಾಸವೇನು?
**ಗುಂಡ:** ನಾವು ಪ್ರೀತಿಸಿದವರನ್ನು ವಿವಾಹವಾಗುವುದು ಪ್ರೇಮ ವಿವಾಹ. ಅನೇಕರು ನೋಡಿ ತಿರಸ್ಕರಿಸಿದ ಹುಡುಗಿಯರನ್ನು ನಾವು ವಿವಾಹವಾಗುವುದು ಸಾಂಪ್ರದಾಯಿಕ ವಿವಾಹ.

***

**ಗೆಳೆಯ:** ನೀನು ಸ್ವಾಮೀಜಿ ಹತ್ರ ಮಂತ್ರ ಕಲಿಯೋಕೆ ಹೋಗಿದ್ದೆಯಲ್ಲ ಏನಾದರೂ ಕಲಿತು ಬಂದೆಯಾ?
**ಗುಂಡ:** ಹೂಂ ಕಲಿತು ಬಂದೆ. ನಿನ್ನ ಮೇಲೆ ಪ್ರಯೋಗಿಸಲಾ?
**ಗೆಳೆಯ:** ಹೂಂ ಪ್ರಯೋಗಿಸು ನೋಡೋಣ.
**ಗುಂಡ:** ಛೂಂ ಮಂತರ್! ಓಂ ಹ್ರೀಂ ಹ್ಯಾಂ ಫಟಾ ಫಟ್! ಏನಾದ್ರೂ ಆಯಿತಾ?
**ಗೆಳೆಯ:** ಇಲ್ಲ ಏನೂ ಆಗಲೇ ಇಲ್ಲ.
**ಗುಂಡ:** ಅಂದರೆ ಸ್ವಾಮೀಜಿ ಮಾತು ನಿಜವಾಯಿತು.
**ಗೆಳೆಯ:** ಏನು?
**ಗುಂಡ:** ಮಂಗಗಳ ಮೇಲೆ ಈ ಮಂತ್ರಗಳು ಪ್ರಭಾವ ಬೀರೋದಿಲ್ಲಂತ!

***

**ಗುಂಡ:** ಡಾಕ್ಟ್ರೇ ನಾಳೆ ನನಗೆ ಆಪರೇಷನ್ ಮಾಡ್ತೀರಲ್ಲ. ಒಂದು ಪಕ್ಷ ನಾನು ಸತ್ತುಹೋದ್ರೆ?
**ವೈದ್ಯ:** ನೋಡ್ರೀ ನಾನು ಮಾಡುವ ಆಪರೇಷನ್‌ನಲ್ಲಿ ಒಂದು ಪಕ್ಷ ಅನ್ನೋ ಮಾತೇ ಇಲ್ಲ.

***

**ಪೊಲೀಸ್:** ಅಲ್ಲಯ್ಯಾ ರೆಡ್ ಸಿಗ್ನಲ್ ಬಿದ್ದಿದ್ರೂ ಒಳ್ಳೆ ಗೂಳಿ ನುಗ್ಗಿದ ಹಾಗೆ ನುಗ್ಗುತ್ತಿದ್ದೀಯಲ್ಲ. ಅದಕ್ಕೆ ಎಂಥಾ ಕಠಿಣ ಶಿಕ್ಷೆ ಗೊತ್ತಾ?
**ಗುಂಡ:** ಅಯ್ಯೋ ಎಂಥಾ ಶಿಕ್ಷೆ ಬೇಕಾದರೂ ಕೊಡಿ ಸಾರ್! ನಾನು ತಡಕೋತೀನಿ. ನನ್ನ ಹೆಂಡತಿ ಕೊಡೋ ಶಿಕ್ಷೆ ಮುಂದೆ ನಿಮ್ಮದು ಯಾವ ಮಹಾ?

***

**ಯಮ:** ದೂತರೇ ಇವನನ್ನು ನರಕಕ್ಕೆ ಎಳೆದೊಯ್ದು ಮೈಯೊಳಗಿನ ಮೂಳೆಗಳನ್ನು ಪುಡಿ ಪುಡಿ ಮಾಡಿ ಕಾದ ಕಬ್ಬಿಣದ ಸಲಾಕೆಗಳಿಂದ ಬರೆ ಹಾಕಿ.
**ಚಿತ್ರಗುಪ್ತ (ದಾಖಲೆ ಪರೀಕ್ಷಿಸಿ):** ಪ್ರಭುವೇ ಇವನಿಗೆ ಶಿಕ್ಷೆ ಬೇಡ. ಯಾಕೆಂದರೆ ಭೂಲೋಕದ ಕರ್ನಾಟಕ ಸಾರಿಗೆ ಸಂಸ್ಥೆಯಲ್ಲಿ ಚಾಲಕನಾಗಿದ್ದಾಗ ಅಲ್ಲಿನ ಗುಂಡಿ ಗೊಟರುಮಯ ರಸ್ತೆಗಳಲ್ಲಿ ಬಸ್ಸನ್ನು ಓಡಿಸಿ ಈಗಾಗಲೇ ಅವನ ಮೂಳೆಗಳೆಲ್ಲ ಪುಡಿ ಪುಡಿಯಾಗಿ ಹೋಗಿವೆ.
**ಯಮ:** ಓಹೋ ಹಾಗೋ! ಹಾಗಾದರೆ ಇವನನ್ನು ರಂಭೆ ಊರ್ವಶಿಯರ ಜೊತೆ ಸ್ವರ್ಗಕ್ಕೆ ಕಳುಹಿಸಿಬಿಡಿ. ಸುಧಾರಿಸಿಕೊಳ್ಳಲಿ.

***

**ಗುಂಡ:** ಒಂದೊಂದು ಸಲ ಸುಳ್ಳು ಕೂಡಾ ನಿಜ ಆಗಿಬಿಡುತ್ತೆ ಕಣೋ.
**ಗೆಳೆಯ:** ಅರೆ ಹೌದಾ? ಹೇಗೆ?
**ಗುಂಡ:** ನಮ್ಮತ್ತೆಗೆ ಆರೋಗ್ಯ ಸರಿ ಇಲ್ಲ ಆಸ್ಪತ್ರೆಗೆ ಕರೆದುಕೊಂಡು ಹೋಗಬೇಕೂಂತ ಬಾಸ್‌ಗೆ ಸುಳ್ಳು ಹೇಳಿ ಮನೆಗೆ ಹೋದೆ. ಅಲ್ಲಿ ನೋಡಿದ್ರೆ ನಮ್ಮ ಅತ್ತೆ ನಿಜವಾಗ್ಲೂ ವಕ್ರಿಸಿರಬೇಕೇ?

ಸಂಗ್ರಹ: ಎಂ.ಕೆ. ಮಂಜುನಾಥ್, ಬೆಂಗಳೂರು